ಅವಾಕ್ಕಾದಳು. ತಲೆಯೆತ್ತಿ ನೋಡಿ, "ನಾನವನ ಹಿಂದೆ ಹೋದಾಗ ನನ್ನನ್ನು ಹುಡುಕಿ ಅವನಿಗೂ ತದುಕಿ ನನಗೂ ನಾಲ್ಕು ಬಾರಿಸಿ ಕರಕೊಂಡು ಬಂದಿದ್ದರೆ ಇವೆಲ್ಲಾ ಆಗುತ್ತಲೇ ಇರಲಿಲ್ಲ. ನಿಮಗೂ ನಾನು ಬೇಕಾಗಿರಲಿಲ್ಲ ಬಿಡಿ" ಎಂದಳು.

"ದರಿದ್ರ ಹೆಂಗಸೆ, ನಿನ್ನಂತಹ ನಾಯಿ ಮುಟ್ಟಿದ ಮಡಿಕೆ ಮೂಸಿಕೊಂಡಿರಲು ನನಗ್ಯಾವ ಗ್ರಹಚಾರವೂ ಇರಲಿಲ್ಲ. ನಾಯಿ ಮುಟ್ಟಿದ್ದು ನಾಯಿಗೇ ಸರಿ ಎಂದು ಬಿಟ್ಟುಬಿಟ್ಟೆ" ಎಂದೆ ಕ್ರುದ್ಧನಾಗಿ.

"ಆಹಾ ಏನು ಮಾತು ದೇವರೇ, ನಿಮ್ಮ ಹೆಂಡತಿಗೊಂದು ನ್ಯಾಯ ಮಗಳಿಗಿನ್ನೊಂದಾ? ನಿಮ್ಮ ಮಗಳ ವಿಷಯದಲ್ಲೂ ಇದೇ ನಡೆದಿದ್ದು! ಅವಳಿಗೆ ಹದಿನಾರು ಹದಿನೇಳಾದಾಗಿನಿಂದ ಆ ನಾಯಿ ನಿಮ್ಮ ಮಗಳನ್ನು ಅನೇಕಬಾರಿ ಮೂಸುತ್ತಲೇ ಇತ್ತು. ಮುಟ್ಟುತ್ತಲೇ ಇತ್ತು! ಎಲ್ಲಾ ಮುಚ್ಚಿಟ್ಟು ಮದುವೆ ಮಾಡಿದೆ. ಅದೇ ಕಾರಣ ಮದುವೆ ಮುರಿದು ಬಿತ್ತು. ಹಾಗೇನೂ ಆ ಮದುವೆ ಅವನಿಗಿಷ್ಟವಿರಲಿಲ್ಲ. ಅನಿವಾರ್ಯಕ್ಕೆ ಒಪ್ಪಿಕೊಂಡಿದ್ದ. ನಾಯಿ ಮುಟ್ಟಿದ ಮಡಿಕೆಯೋ ಶುದ್ಧವಾದದ್ದೋ... ಅವನಿಗವಳು ಒಬ್ಬ ಹೆಣ್ಣಾಗಿ ಮಾತ್ರ ಕಾಣಿಸಿದಳು. ಮಗಳಾಗಿ ಅಲ್ಲ. ನಾನು ಹೇಳಲಿಲ್ಲವೆ ದೇವರೆ... ಬೆಂಕಿಗೆ ಎಲ್ಲವೂ ಎಲ್ಲರೂ ಒಂದೇ ಎಂದು" ಎಂದು ಹೇಳುತ್ತಾ ಬಿಕ್ಕಿದಳು. ನನ್ನ ಕಣ್ಣಿಂದಲೂ ಪಟಪಟನೆ ಕಂಬನಿ ಉದುರತೊಡಗಿತು.

ಸಾವರಿಸಿಕೊಂಡು, "ಈಗಲೂ... ಪಾಪುವನ್ನು ವಾಪಸ್ ಕರೆತರೋಣ. ನಾನವಳನ್ನು ಅವಳ ಮಗುವಿನ ಸಮೇತ ಸಾಕ್ಕೋತೀನಿ. ನಡಿ, ನಾವೇ ಖುದ್ದಾಗಿ ಹೋಗಿ ಅವಳ ಜೊತೆ ಮಾತಾಡಿ ಅವಳನ್ನು ಒಪ್ಪಿಸಿ ಇಲ್ಲಿಗೆ ಕರೆತರೋಣ. ಇಲ್ಲ... ಅವಳ ನಂಬರ್ ಕೊಡು, ನಾನೇ ಮಾತಾಡ್ತೀನಿ" ಎಂದೆ ತ್ವರೆಯಿಂದ. ನನ್ನ ಆತುರವನ್ನು ಲೇವಡಿ ಮಾಡುವವಳಂತೆ, "ಅದೆಲ್ಲಾ ಆಗೋ ಹೋಗೋ ಮಾತಲ್ಲ. ನಿಮ್ಮ ಮಗಳು ಅವನನ್ನು ಬಿಟ್ಟು ಬರೋ ಸ್ಥಿತಿಯಲ್ಲಿ ಇಲ್ಲವೇ ಇಲ್ಲ. ಅಲ್ಲ ದೇವರೆ, ಈಗ ತೋರಿಸ್ತಿರೋ ಕಾಳಜಿ... ಒಂದೇ ಒಂದು ಸಲ ನನ್ನ ವಿಷಯದಲ್ಲಿ ತೋರಿಸಿದ್ದಿದ್ರೆ ನಾನೂ ಉಳಕೋತಿದ್ದೆ, ಪಾಪೂನು ಉಳೀತಿದ್ಲು! ಒಂದು ಸರ್ತಿ ನಾನೇ ಬಂದಿದ್ದೆ. ಎಲ್ಲಾ ಮರೆತು ಕ್ಷಮಿಸಿಬಿಡಿ ನಿಮ್ಮನೆ ನಾಯಾಗಿ ಬಿದ್ದಿರ್ತೀನಿ ಅಂತ ಹೇಳೋಕೆ. ನನ್ನನ್ನು ಮಾತನಾಡಿಸೋದಿರ್ಲಿ... ಕನಿಷ್ಠ ಬಾಗಿಲು ತೆಗೆಯೋಕ್ಕೂ ನಿಮಗೆ ಇಷ್ಟವಿರಲಿಲ್ಲ. ನನ್ನ ವಿಷ್ಯದಲ್ಲಿ ಮನಸ್ಸು ಒಡಕೊಂಡಿದ್ರಿ. ತಪ್ಪಿಲ್ಲ, ನಾನೇನು ಅದನ್ನು ತಪ್ಪು ಅಂತಿಲ್ಲ. ಆದ್ರೂ... ನಿಮ್ಮ ಮಗಳ ವಿಷ್ಯಕ್ಕೆ ಇದ್ದ ಪ್ರೀತಿ ನನ್ಮೇಲೆ ಬರ್ಲೇ ಇಲ್ಲ ನಿಮಗೆ. ಮಗಳ ತಪ್ಪು ಕ್ಷಮಿಸಕ್ಕೆ ಆಗೋಹಾಗೆ ಹೆಂಡ್ತಿ ತಪ್ಪು ಆಗಲ್ಲಾ ಅಲ್ವಾ... ಎಷ್ಟಂದ್ರೂ ಬ್ಲಡ್ ಈಸ್ ಥಿಕ್ಕರ್ ದ್ಯಾನ್ ವಾಟರ್ ಅಂತಾರಲ್ಲ" ಎಂದು ನಕ್ಕಳು ಅಳುತ್ತ.

ನನ್ನ ಹೊಟ್ಟೆಯೊಳಗೆ ಸಂಕಟದ ಅಲೆಗಳು ತಿರುಗತೊಡಗಿ ತಲೆಯನ್ನು ಯಾರೋ ಸುತ್ತಿಗೆಯಿಂದ ಹೊಡೆದಂತೆ ಅನ್ನಿಸತೊಡಗಿತ್ತು.


**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿರುವ ಗೃಹಿಣಿ. ಅವರ ಎರಡು ಕಾದಂಬರಿಗಳು, ಎರಡು ಕಥಾಸಂಕಲನಗಳು, ಎರಡು ಕವನ ಸಂಕಲನಗಳು ಪ್ರಕಟವಾಗಿದೆ. 'ಮಯೂರ'ವೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ. 'ಪಯಣರಾಗ' ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಹೊರತಂದಿದ್ದು, 'ಕದಳಿ ಕಲ್ಯಾಣ' ಎಂಬ ನಾಟಕವನ್ನೂ ಅವರು ಬರೆದಿದ್ದಾರೆ.